# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 260(272) |
| ಉತ್ತರಿಸಬೇಕಾದ ದಿನಾಂಕ | 12.08.2025 |
| ಉತ್ತರಿಸುವ ಸಚಿವರು | ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕಲಬುರಗಿಯ ನಗರಾಭಿವೃದ್ಧಿ ಪ್ರಾಧಿಕಾರವು ಡಾ: ಖಮರ-ಉಲ್-ಇಸ್ಲಾಂ ವಸತಿ ಬಡಾವಣೆ. ಹಾಗರಗಾ 50:50 ವಸತಿ ಯೋಜನೆ ಪ್ರಾರಂಭಗೊಂಡಿದ್ದು ಮತ್ತು ಮುಕ್ತಾಯಗೊಂಡಿದ್ದು ಯಾವಾಗ: | ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರವು ಡಾ॥ ಖಮರ ಉಲ್ ಇಸ್ಲಾಂ ವಸತಿ ಬಡಾವಣೆ, ಹಾಗರಗಾ ಗ್ರಾಮದ ಸ.ನಂ.213/1, 214/1,2 ಹಾಗೂ ಇತರೆ ಸರ್ವೆ ನಂಬರ್ ಗಳಲ್ಲಿನ ಒಟ್ಟು 117ಎ-05ಗು (ಪೋಟ ಖರಾಬು 'ಅ' 14ಗುಂಟೆ ಒಳಗೊಂಡಂತೆ) ವಿಸ್ತೀರ್ಣದಲ್ಲಿ ಶೇ.50:50 ರೈತರ ಸಹಭಾಗಿತ್ವ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ:ನಅಇ 104 ಗುಅಪ್ರಾ 2015, ಬೆಂಗಳೂರು, ದಿನಾಂಕ:01-06-2021 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ನಅಇ 124 ಗುಅಪ್ರಾ 2024 (ಇ-ಕಡತ) ಬೆಂಗಳೂರು, ದಿನಾಂಕ:16-12-2024 ರಂದು ಪರಿಷ್ಕೃತ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br><br>ಸಿವಿಲ್ ಕಾಮಗಾರಿಗಳ ಅಂದಾಜುಪಟ್ಟಿಗೆ ಲೋಕೋಪಯೋಗಿ ಇಲಾಖೆಯಿಂದ ಅನುಮೋದನೆ ಪಡೆಯಲಾಗಿದ್ದು, ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ KUWS&DB ಇಲಾಖೆಯಿಂದ ಅನುಮೋದನೆ ಪಡೆಯಲಾಗಿರುತ್ತದೆ ಹಾಗೂ ವಿದ್ಯುತ್ತೀಕರಣದ ಕಾಮಗಾರಿಗೆ GESCOM ಇಲಾಖೆಯಿಂದ ಅಂದಾಜು ಪಟ್ಟಿ ಸಲ್ಲಿಸಬೇಕಾಗಿರುತ್ತದೆ. ವಿದ್ಯುತ್ತೀಕರಣದ ಕಾಮಗಾರಿಯ ಅಂದಾಜು ಪಟ್ಟಿ ಬಂದ ಕೂಡಲೇ ಸಮಗ್ರ ಕಾಮಗಾರಿಗಳ ಟೆಂಡರ್ ಕರೆಯಲು ಕ್ರಮವಹಿಸಲಾಗುವುದು.<br><br>ಈ ವಸತಿ ಯೋಜನೆಯಲ್ಲಿನ ನಿವೇಶನಗಳ ಹಂಚಿಕೆಗಾಗಿ ಪ್ರಾಧಿಕಾರದಿಂದ ದಿನಾಂಕ: 20-06-2025 ರಂದು ಪ್ರಕಟಣೆ ಹೊರಡಿಸಲಾಗಿದ್ದು, ಒಟ್ಟು 5185 ಅರ್ಜಿಗಳು ಸ್ವೀಕೃತವಾಗಿದ್ದು, ಹಂಚಿಕೆ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ . |
| ಆ) | ಸದರಿ 50:50 ರ ರೈತರ ಸಹಭಾಗಿತ್ವದ ಯೋಜನೆಗೆ ಕಾಲಾವಕಾಶ ನಿಗಧಿಪಡಿಸುವ ಅವಕಾಶವಿದೆಯೇ/ ನಿಗಧಿಪಡಿಸಬಹುದೇ: | ಪ್ರಾಧಿಕಾರವು ರೈತರ ಸಹಭಾಗಿತ್ವದಲ್ಲಿ 50:50 ಅನುಪಾತದಲ್ಲಿ ಅಭಿವೃದ್ಧಿಪಡಿಸುವ ಯೋಜನೆಗಳಿಗೆ ಕಾಲಾವಕಾಶ ನಿಗಧಿಪಡಿಸಲು ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ. |

| | | |
|---|---|---|
| ಇ) | ನಗರಾಭಿವೃದ್ಧಿ ಪ್ರಾಧಿಕಾರದಿಂದ ಕೈಗೊಳ್ಳುವ ಯೋಜನೆಗಳು ನಿಗಧಿತ ಅವಧಿಯೊಳಗೆ ಮುಗಿಯದೇ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಯೋಜನೆಗಳು ವಿಳಂಬವಾಗಲು ಕಾರಣವೇನು: ಹಾಗೂ ಇದರ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು: (ಸಂಪೂರ್ಣ ವಿವರ ನೀಡುವುದು) | ಬಂದಿದೆ<br><br>ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಕೈಗೊಳ್ಳುವ ವಸತಿ ಯೋಜನೆಗಳಲ್ಲಿನ ಕೆಲವು ಭೂ ಮಾಲೀಕರು ಸಹಕಾರ ನೀಡದೇ ಇದ್ದಾಗ, ಇನ್ನು ಕೆಲವು ಭೂ ಮಾಲೀಕರು ನ್ಯಾಯಾಲಯದ ಮೊರೆ ಹೋದಾಗ, ನ್ಯಾಯಾಲಯದಿಂದ ಅಂತಿಮ ತೀರ್ಮಾನ ಬರುವವರೆಗೂ, ಅಂತಹ ಸಂದರ್ಭಗಳಲ್ಲಿ ವಸತಿ ಯೋಜನೆಗಳನ್ನು ಪ್ರಾಧಿಕಾರದಿಂದ ಅನುಷ್ಠಾನಗೊಳಿಸಲು ವಿಳಂಬಗೊಳ್ಳುತ್ತವೆ.<br><br>ಅಲ್ಲದೇ, ಪ್ರಾಧಿಕಾರಗಳು ಅಭಿವೃದ್ಧಿಪಡಿಸುವ ಯೋಜನೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಸ್ವಂತ ಆರ್ಥಿಕ ಸಂಪನ್ಮೂಲದಿಂದ ಅಭಿವೃದ್ಧಿ ಪಡಿಸಬೇಕಾಗಿರುವುದರಿಂದ ಆರ್ಥಿಕ ಸಂಪನ್ಮೂಲ ಕ್ರೂಢೀಕರಿಸಿ ಅಭಿವೃದ್ಧಿಪಡಿಸಲು ಹೆಚ್ಚಿನ ಕಾಲಾವಕಾಶ ಬೇಕಾಗುತ್ತದೆ.<br><br>ಈ ರೀತಿ ವಿಳಂಬವಾಗುವ ವಸತಿ ಯೋಜನೆಗಳ ಬಗ್ಗೆ ಸರ್ಕಾರದಿಂದ ಕಾಲಕಾಲಕ್ಕೆ ತ್ವರಿತವಾಗಿ ಇತ್ಯರ್ಥಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಎಲ್ಲಾ ಅಡೆತಡೆಗಳನ್ನು ಬಗೆಹರಿಸಿಕೊಂಡು ವಸತಿ ಯೋಜನೆಗಳನ್ನು ಶೀಘ್ರವಾಗಿ ಮುಕ್ತಾಯಗೊಳಿಸುವುದು ಸಂಬಂಧಪಟ್ಟ ಪ್ರಾಧಿಕಾರದ ಜವಾಬ್ದಾರಿಯಾಗಿರುತ್ತದೆ. |
| ಈ) | ಬಿಡಿ ನಿವೇಶನ ಸುತ್ತೋಲೆಯಲ್ಲಿ ಶೇಕಡಾ 10% ರಷ್ಟು ಸಾರ್ವಜನಿಕ ವ್ಯಕ್ತಿಗಳಿಗೆ ನೀಡಬೇಕಾದ ಕೋಟಾ ರದ್ದುಪಡಿಸಿದ್ದು, ಯಾವ ಕೋಟಾದ ಅಡಿಯಲ್ಲಿ ಸೇರಿಸಲಾಗಿದೆ ಮತ್ತು ಸರ್ಕಾರದ ನಿಯಮಾವಳಿಗಳು ಯಾವುವು (ಸಂಪೂರ್ಣ ವಿವರ ನೀಡುವುದು)? | ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 291 ಅಪ್ರಾವಿ 1998 ದಿನಾಂಕ:24.11.2000 ರಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಬಿಡಿ ನಿವೇಶನಗಳನ್ನು ಹಂಚಿಕೆ ಮಾಡುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.<br>ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 52 ಬೆಮಪ್ರಾ 2020(ಭಾಗ-1) ದಿನಾಂಕ:04.01.2024 ರ ಅಂಶ (3)ರಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಲಭ್ಯವಿರುವ ಬಿಡಿ ನಿವೇಶನಗಳನ್ನು ಪ್ರತಿ ತಿಂಗಳ ಕೊನೆಯಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: : ನಅಇ 291 ಅಪ್ರಾವಿ 1998 ದಿನಾಂಕ:24.11.2000 ರಲ್ಲಿ ನಿಗದಿಪಡಿಸಿರುವಂತೆ ವಿಲೇವಾರಿ ಮಾಡಲು ನಿಯಮಾನುಸಾರ ಕ್ರಮಕೈಗೊಳ್ಳತಕ್ಕದ್ದು ಎಂದು ನಿರ್ದೇಶನ ನೀಡಲಾಗಿದೆ.<br>ಆದ್ದರಿಂದ ಬಿಡಿ ನಿವೇಶನಗಳನ್ನು ಈ ಹರಾಜು ಮೂಲಕ ವಿಲೇಗೊಳಿಸಲಾಗುತ್ತಿದೆ. |

ಸಂಖ್ಯೆ: ನಅಇ 153 ಗುಅಪ್ರಾ 2025

**(ಬಿ.ಎಸ್.ಸುರೇಶ)**
( ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು)